॥ ಶ್ರೀ ಭೋಗಾಪುರೇಶ ಪ್ರಸನ್ನ ॥

ರಥವನೇರಿದ ನೋಡೆ ! ಭೋಗಾಪುರೇಶ ॥ ಪ ॥

ಅತಿಭಕ್ತಿಯಿಂದಲಿ ತುತಿಸುವ ಜನರಿಗೆ
ಪಿತನಂದದಿ ಪೊರೆವಾ ॥ ಅ.ಪ.॥

ದೇಶದೇಶಗಳಿಂದ ಆಸೆಯಿಂದಲಿ ಬರುವ ।
ಅಶೇಷ ಭಕ್ತರುಗಳ ದೋಷಗಳೆಣಿಸದೆ ।
ನಾ ಸಲುಹುವೆನೆಂಬಾ ॥ ೧ ॥

ಅಂಧ ಹೆಳವ ಮೂಗ ಒಂದ್ಯಾ ಬಧಿರರು ।
ಒಂದೆ ಮನದಲಿ ಸೇವೆಯ ಮಾಡಲು ।
ನಂದದಿಷ್ಟ ಕೊಡುವಾ ॥ ೨ ॥

ರೋಗಾದಿಗಳ ಕಳೆದು ಭೋಗಭಾಗ್ಯಗಳೀವ ।
ಭಾಗವತ ಜನಪ್ರಿಯ ಶ್ರೀ ಮುಕುಂದನಂಘ್ರಿಯ ।
ಸಾನುರಾಗದಿ ಭಜಿಪ ॥ ೩ ॥